ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ
ದಂಡಾಧಿಕಾರಿಗಳವರ ನ್ಯಾಯಾಲಯ, ಅರಸೀಕೆರೆ

- ಉಪಸ್ಥಿತರು -

ಶ್ರೀಮತಿ ಮಮತ ಪಿ., ಬಿ.ಎ., ಎಲ್.ಎಲ್.ಬಿ., ಎಲ್.ಎಲ್.ಎಂ.,
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ
ದಂಡಾಧಿಕಾರಿಗಳವರು, ಅರಸೀಕೆರೆ

ಅಸಲು ದಾವಾ ಸಂಖ್ಯೆ:**514/2024**

ದಿನಾಂಕ : **16** ನೇ ನವೆಂಬರ್**, 2024**

ವಾದಿ : ಶ್ರೀ ಸುರೇಶ.ಎಸ್.,
ಬಿನ್ ಶಿವರುದ್ರೇಗೌಡ,
ವಯಸ್ಸು 42 ವರ್ಷ,
ವಾಸಃ ಕೆರೆಕೋಡಿಹಳ್ಳಿ
ಉಃ ಧನಂಜಯಪುರ ಗ್ರಾಮ,
ಜಾವಗಲ್ ಹೋಬಳಿ,
ಅರಸೀಕೆರೆ ತಾಲ್ಲೂಕು.

(ವಾದಿಯ ಪರವಾಗಿ
ಶ್ರೀ.ಆರ್.ಎಲ್., ವಕೀಲರು )

**:** ವಿರುದ್ಧ **:**

ಪ್ರತಿವಾದಿಯರು :

1. ಶ್ರೀಮತಿ ಜಯಮ್ಮ
   ಕೋಂ ಪೌತಿ ಬಾಳೇಗೌಡ,
   ವಯಸ್ಸು 70 ವರ್ಷ,

2. ಶ್ರೀ ಧರ್ಮೇಗೌಡ
   ಬಿನ್ ಪೌತಿ ಬಾಳೇಗೌಡ,
   ವಯಸ್ಸು 52 ವರ್ಷ,

3. ಶ್ರೀಮತಿ ವನಜಾಕ್ಷಿ
   ಕೋಂ ಧರ್ಮೇಗೌಡ,
   ವಯಸ್ಸು 48 ವರ್ಷ,

4. ಶ್ರೀ ಕಾರ್ತಿಕ್
ಬಿನ್ ಧರ್ಮೇಗೌಡ,
ವಯಸ್ಸು 24 ವರ್ಷ,

5. ಶ್ರೀ ಯಶ್ವಂತ್
ಬಿನ್ ಧರ್ಮೇಗೌಡ,
ವಯಸ್ಸು 22 ವರ್ಷ,

ಎಲ್ಲರೂ ವಾಸಃ ಕೆರೆಕೋಡಿಹಳ್ಳಿ
ಉಃ ಧನಂಜಯಪುರ ಗ್ರಾಮ,
ಜಾವಗಲ್ ಹೋಬಳಿ,
ಅರಸೀಕೆರೆ ತಾಲ್ಲೂಕು.

(ಪ್ರತಿವಾದಿಯ ಪರವಾಗಿ
ಶ್ರೀ.ಎಸ್.ಎಂ., ವಕೀಲರು)

ಮಧ್ಯಂತರ ಅರ್ಜಿಯ ಸಂಖ್ಯೆ **-1** ರ

ಅರ್ಜಿದಾರರು/ ವಾದಿ : ಶ್ರೀ ಸುರೇಶ.ಎಸ್.,
ಬಿನ್ ಶಿವರುದ್ರೇಗೌಡ.

**:** ವಿರುದ್ಧ **:**

ಎದುರುದಾರರು/ಪ್ರತಿವಾದಿಯರು : ಶ್ರೀಮತಿ ಜಯಮ್ಮ
ಕೋಂ ಪೌತಿ ಬಾಳೇಗೌಡ ಮತ್ತು ಇತರರು.

| | | |
|---|---|---|
| i. | Provision under which the application is filed | U/o XXXIX rule 1 and 2 of CPC |
| ii | Relief sought for | To grant temporary injunction |
| iii | The date on which the application is filed | 29.07.2024 |
| iv | Number of the application | I |
| v | The date on which the order objection is filed by different opponent | 21.10.2024 |
| vi | The date on which the order were passed on the said application | 16.11.2024 |

ಮಧ್ಯಂತರ ಅರ್ಜಿ ಸಂಖ್ಯೆ ***1* - ** ವ್ಯವಹಾರ ಪ್ರಕ್ರಿಯ ಸಂಹಿತೆ ಆದೇಶ ***39*** ನಿಯಮ ***1***

ಮತ್ತು ***2*** ರ ರೀತ್ಯಾ ಆದೇಶ

ವಾದಿ/ಅರ್ಜಿದಾರರು ವ್ಯವಹಾರ ಪ್ರಕ್ರಿಯಾ ಸಂಹಿತೆ ಆದೇಶ 39, ನಿಯಮ 1 ಮತ್ತು 2 ರಲ್ಲಿ ಸದರಿ 1ನೇ ಮಧ್ಯಂತರ ಅರ್ಜಿಯನ್ನು ಸಲ್ಲಿಸಿದ್ದು, ಈ ದಾವಾ ತೀರ್ಮಾನವಾಗುವವರೆಗೆ, ಪ್ರತಿವಾದಿಯರಾಗಲೀ ಅಥವಾ ಅವರ ಕಡೆಯವರು ಯಾರೇ ಆಗಲೀ ದಾವಾ ಅನುಸೂಚಿ 'ಬಿ' ಸ್ವತ್ತಿನ ದಾರಿಗೆ ಓಡಾಡಲು ಯಾವ ರೀತಿ ತೊಂದರೆ ಕೊಡದಂತೆ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡಬೇಕಾಗಿ ಕೋರಿರುತ್ತಾರೆ.

**2.** ವಾದಿಯು ಈ ಕೆಳಕಂಡಂತೆ ತನ್ನ ವಾದ ಪತ್ರದಲ್ಲಿ ದಾವಾ ಷೆಡ್ಯೂಲ್ ಸ್ವತ್ತನ್ನು ವಿವರಿಸಿದ್ದಾರೆ:-

ದಾವಾ ಷೆಡ್ಯೂಲ್ **'ಎ'** ಅನುಸೂಚಿಯ ವಿವರ:-

ಅರಸೀಕೆರೆ ತಾಲ್ಲೂಕು, ಜಾವಗಲ್ ಹೋಬಳಿ, ಕೆರೆಕೋಡಿಹಳ್ಳಿ ಉಃ ಧನಂಜಯಪುರ ಗ್ರಾಮದ ಆಸ್ತಿಯ ಸರ್ವೆ ನಂ.24/1 16 ಗುಂಟೆಗೆ ಚೆಕ್ಕು ಬಂಧಿ:-

| | | |
|---|---|---|
| ಪೂರ್ವ | : | ಶಿವರುದ್ರೇಗೌಡರವರ ಜಮೀನು, |
| ಪಶ್ಚಿಮ | : | ದಾನೇಗೌಡರವರ ಜಮೀನು, |
| ಉತ್ತರ | : | ಓಣಿ ನಂತರ ಪ್ರತಿವಾದಿಗಳ ಜಮೀನು, |
| ದಕ್ಷಿಣ | : | ಮಹಾಲಿಂಗೇಗೌಡರ ಜಮೀನು. |

ದಾವಾ ಷೆಡ್ಯೂಲ್ **'ಬಿ'** ಅನುಸೂಚಿಯ ವಿವರ:-

ಅರಸೀಕೆರೆ ತಾಲ್ಲೂಕು, ಜಾವಗಲ್ ಹೋಬಳಿ, ಕೆರೆಕೋಡಿಹಳ್ಳಿ ಉಃ ಧನಂಜಯಪುರ ಗ್ರಾಮದ ಆಸ್ತಿಯ ಸರ್ವೆ ನಂ.25/8 ಮತ್ತು 25/3 ರಲ್ಲಿ ಹಾದು ಹೋಗಿರುವ ಪೂರ್ವ-ಪಶ್ಚಿಮ 80 ಅಡಿ ಉತ್ತರ-ದಕ್ಷಿಣ 8 ಅಡಿ ಇದಕ್ಕೆ ಚೆಕ್ಕು ಬಂಧಿ:-

| | | |
|---|---|---|
| ಪೂರ್ವ | : | ಚಿಕ್ಕಣಕಟ್ಟೆ, |
| ಪಶ್ಚಿಮ | : | ಜಾವಗಲ್-ಬಾಣಾವರ ರಸ್ತೆ, |
| ಉತ್ತರ | : | ಪ್ರತಿವಾದಿಗಳ ಜಮೀನು, |

ದಕ್ಷಿಣ : ದಾನೇಗೌಡ ಮತ್ತು ವಾದಿಯ ಜಮೀನು.

(ಇನ್ನೂ ಮುಂದೆ ದಾವಾ ಅನುಸೂಚಿ ಸ್ವತ್ತು ಎಂದು ಕರೆಯಲಾಗುವುದು)

**3.** ವಾದಿಯು ಮುಂದುವರೆದು ತನ್ನ ಪ್ರಮಾಣ ಪತ್ರದಲ್ಲಿ ತಿಳಿಸುವುದೇನೆಂದರೆ ಃ-

ದಾವಾ 'ಎ' ಅನುಸೂಚಿ ಸ್ವತ್ತನ್ನು ತನ್ನ ತಂದೆ ಶಿವರುದ್ರೇಗೌಡ ರವರು ದಿನಾಂಕ 31.12.2009 ರಂದು ಕ್ರಯಕ್ಕೆ ಪಡೆದು ಅಂದಿನಿಂದ ದಾವಾ ಅನುಸೂಚಿ ಸ್ವತ್ತಿನ ಸ್ವಾಧೀನಾನುಭದಲ್ಲಿ ಮುಂದುವರೆದುಕೊಂಡು ಬಂದಿದ್ದು, ಸದರಿ ದಾವಾ 'ಎ' ಷೆಡ್ಯೂಲ್ ಸ್ವತ್ತಿಗೆ ಹೋಗಲು ಬಾಣಾವರ-ಜಾವಗಲ್ ರಸ್ತೆಯಿಂದ ಸರ್ವೆ ನಂ.24 ಮತ್ತು ನಂತರದಲ್ಲಿ ಚಿಕ್ಕನಕಟ್ಟೆಗೆ ದನ ಕರುಗಳಿಗೆ ನೀರನ್ನು ಕುಡಿಸಲು ಮತ್ತು ಟ್ರ್ಯಾಕ್ಟರ್ ಹೂಳು ಎತ್ತಲು ಹೋಗಲು ಸಾರ್ವಜನಿಕರು ಉಪಯೋಗಿಸುತ್ತಿರುವುದಾಗಿ ತಿಳಿಸಿರುತ್ತಾರೆ. ಮುಂದುವರೆದು, ಪ್ರತಿವಾದಿಯ ಸರ್ವೆ ನಂ.25/8 ಮತ್ತು 25/3 ರ ಮಧ್ಯದಲ್ಲಿ ಓಣಿ ಹಾದುಹೋಗಿದ್ದು, ಸದರಿ ರಸ್ತೆಯನ್ನು ಕಳೆದ 40 ವರ್ಷಗಳಿಂದಲೂ ಉಪಯೋಗಿಸುತ್ತಿರುವುದಾಗಿ ತಿಳಿಸಿರುತ್ತಾರೆ. ರಸ್ತೆ(ಓಣಿ) 8 ಅಡಿ ಅಗಲ ಮತ್ತು 80 ಅಡಿ ಉದ್ದವಿದ್ದು, ಸದರಿ ರಸ್ತೆಯು ತಾನು ವ್ಯವಸಾಯದ ಕೆಲಸಕ್ಕೆ ದನ ಕರುಗಳು ಕಟ್ಟೆಯಲ್ಲಿ ನೀರು ಕುಡಿಸಲು ಮತ್ತು ಟ್ರಾಕ್ಟರ್ ಗಳಿಂದ ಓಡಾಡಲು ಬಳುತ್ತಿದ್ದ ಏಕೈಕ ದಾರಿಯಾಗಿದ್ದು ಸದರಿ ರಸ್ತೆಯು ಅನಭೋಗದ ಹಕ್ಕಿಗೆ ಒಳಪಟ್ಟ ರಸ್ತೆಯಾಗಿರುತ್ತದೆ ಎಂದು ತಿಳಿಸಿರುತ್ತಾರೆ.

4. ವಾದಿಯು ಮುಂದುವರೆದು, ದಾವಾ 'ಬಿ' ಅನುಸೂಚಿ ದಾರಿಯನ್ನು ಹೊರತುಪಡಿಸಿ 'ಎ' ಅನುಸೂಚಿ ಸ್ವತ್ತು ಮತ್ತು ಕಟ್ಟೆಗೆ ಹೋಗಲು ಮತ್ತು ಸರ್ವೆ ನಂ.24/6 ಹಾಗೂ ಸರ್ವೆ ನಂ.23 ಕ್ಕೆ ಹೋಗಲು ಯಾವುದೇ ಬೇರೆ ದಾರಿ ಇರುವುದಿಲ್ಲ

ಎಂದು ತಿಳಿಸಿರುತ್ತಾರೆ. ಸದರಿ ದಾವಾ ಬಿ ಷಡ್ಯೂಲ್ ರಸ್ತೆಯಲ್ಲಿಯೇ ತಾನು ಮತ್ತು ಗ್ರಾಮಸ್ಥರು ಸುಮಾರು ವರ್ಷಗಳ ಕಾಲದಿಂದಲೂ ಓಡಾಡುತ್ತಿದ್ದು ಪ್ರತಿವಾದಿಯರು ಈಗ್ಗೆ ಒಂದು ವಾರದಿಂದ ಹಿಂದೆ ಸದರಿ ದಾರಿಯಲ್ಲಿ ಓಡಾಟ ಮಾಡಬಾರದು ಎಂದು ತಕರಾರು ಮಾಡಿ ರಸ್ತೆಗೆ ಬೇಲಿ ಹಾಕಲು ಪ್ರಯತ್ನಪಟ್ಟಿರುತ್ತಾರೆಂದು ತಿಳಿಸಿರುತ್ತಾರೆ. ಆ ಸಂದರ್ಭದಲ್ಲಿ ತಾನು ಮತ್ತು ಗ್ರಾಮಸ್ಥರು ಪ್ರಶ್ನೆ ಮಾಡಲಾಗಿ ಸ್ಥಳದಲ್ಲಿ ಗಲಾಟೆಯಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಮುಂದುವರೆದು, ಪ್ರತಿವಾದಿಯರು ಒಂದು ವಾರದ ಹಿಂದೆ ತನ್ನ ಓಡಾಟಕ್ಕೆ ತೀವ್ರವಾಗಿ ತೊಂದರೆಯನ್ನುಟು ಮಾಡಿ ತನ್ನ ಹಕ್ಕನ್ನು ಧಿಕ್ಕರಿಸಿರುತ್ತಾರೆ ಎಂದು ತಿಳಿಸಿರುತ್ತಾರೆ. ಪ್ರತಿವಾದಿಯರು ಯಾವುದೇ ಸಂದರ್ಭದಲ್ಲಾದರೂ ಸದರಿ ರಸ್ತೆ ಅಥವಾ ದಾರಿಯನ್ನು ಮುಚ್ಚುವ ಸಾಧ್ಯತೆ ಹೆಚ್ಚಾಗಿರುವುದರಿಂದ ತಾನು ಪ್ರತಿವಾದಿಯರ ಅಕ್ರಮ ಕಾರ್ಯವನ್ನು ತಡೆಯುವುದು ಬಹಳ ಕಷ್ಟಕರವಾಗಿದ್ದ ಕಾರಣ ಅನ್ಯ ಮಾರ್ಗವಿಲ್ಲದೇ ದಾವೆಯನ್ನು ನ್ಯಾಯಾಲಯದ ಮುಂದೆ ತಂದಿರುವುದಾಗಿ ತಿಳಿಸಿರುತ್ತಾರೆ. ಆದ್ದರಿಂದ ಈ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಲು ಕೋರಿರುತ್ತಾರೆ.

5. ವಾದಿಯು ಸಲ್ಲಿಸಿದ ದಾವೆಯನ್ನು ದಾಖಲಿಸಿಕೊಂಡ ನಂತರ ಪ್ರತಿವಾದಿಯರಿಗೆ ನ್ಯಾಯಾಲಯದ ಸಮನ್ಸ್ ನ್ನು ಜಾರಿಗೊಳಿಸಿದ್ದು, ಪ್ರತಿವಾದಿಯರು ತಮ್ಮ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿರುತ್ತಾರೆ. ಪ್ರತಿವಾದಿಯರು ಮಧ್ಯಂತರ ಅರ್ಜಿಗೆ ತಕರಾರನ್ನು ಮತ್ತು ತಮ್ಮ ಪರ ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತಾರೆ.

6. ಸದರಿ ಮಧ್ಯಂತರ ಅರ್ಜಿಗೆ ಪ್ರತಿವಾದಿಯು ತಕರಾರನ್ನು ಸಲ್ಲಿಸಿದ್ದು, ವಾದಿಯು ಸಲ್ಲಿಸಿರುವ ಮಧ್ಯಂತರ ಅರ್ಜಿಯು ಕಾನೂನು ಮತ್ತು ವಿದ್ಯಮಾನಗಳ

ರೀತ್ಯಾ ನಿಲ್ಲತಕ್ಕದ್ದಲ್ಲ ತಿಳಿಸಿದ್ದು, ವಾದಿಯ ವಾದಾಂಶಗಳನ್ನು ಅಲ್ಲಗಳೆಯುತ್ತಾ ಸರ್ವೆ ನಂ.23 ರ ಆಸ್ತಿಯು ದಾನೇಗೌಡರಿಗೆ ಸಂಬಂಧಿಸಿದ ಆಸ್ತಿಯಾಗಿದ್ದು, ಜಾವಗಲ್-ಬಾಣಾವರ ಮುಖ್ಯರಸ್ತೆಗೆ ಹೊಂದಿಕೊಂಡಿರುವ ರಸ್ತೆಯಾಗಿರುತ್ತದೆ. ಬೇರೆ ಯಾವುದೇ ರಸ್ತೆಯ ಅವಶ್ಯಕತೆ ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ಮುಂದುವರೆದು, ವಾದಿಯೇ ಘನ ನ್ಯಾಯಾಲಯದಿಂದ ತಮ್ಮ ವಿರುದ್ಧ ಪ್ರತಿಬಂಧಕಾಜ್ಞೆ ಪಡೆಯುವ ದೃಷ್ಟಿಯಿಂದ ಸುಳ್ಳು ಸಂಗತಿಯನ್ನು ನಮೂದಿಸಿರುತ್ತಾರೆ. ಅಲ್ಲದೇ ವಾದಿಯು ಹೇಳಿರುವಂತೆ 'ಎ' ಅನುಸೂಚಿ ಸ್ವತ್ತಿಗೆ ಹೋಗಿ ಬರಲು ಜಾವಗಲ್ ಕೆರೆ ಕೋಡಿಯಿಂದ ಚಿಕ್ಕನಕಟ್ಟೆ ಮೂಲಕ ಸುಮಾರು 20 ಅಡಿ ಅಗಲ 1 ಕಿ.ಮೀ.ಉದ್ದದ ರಸ್ತೆ ಇರುತ್ತದೆ ಅದೇ ರಸ್ತೆಯನ್ನು ಮೊದಲಿನಿಂದಲೂ ವಾದಿ ಉಪಯೋಗಿಸುತ್ತಾ ಬಂದಿರುತ್ತಾರೆ ಎಂದು ತಿಳಿಸಿರುತ್ತಾರೆ.

7. ಪ್ರತಿವಾದಿಯರು ಮುಂದುವರೆದು, ವಾದಿಯು ತನ್ನ ಜಮೀನಾದ ಸರ್ವೆ ನಂ.24/1 ಹಾಗೂ ಅವರ ಇತರೆ ಜಮೀನುಗಳಿಗೆ ಹೋಗಿ ಬರಲು ಜಾವಗಲ್ ಕೆರೆ ಕೋಡಿಯಿಂದ ಚಿಕ್ಕನಕಟ್ಟೆವರೆಗೆ ಸುಮಾರು 20 ಅಡಿ ಅಗಲ 1 ಕಿ.ಮೀ. ಉದ್ದದ ಕಚ್ಚಾ ರಸ್ತೆಯಿದ್ದು, ಅದೇ ರಸ್ತೆಯನ್ನು ವಾದಿಯು ಈಗ್ಗೆ ಲಗಾಯ್ತಿನಿಂದ ಉಪಯೋಗಿಸುತ್ತಾ ಬರುತ್ತಿದ್ದಾರೆ ಎಂದು ತಿಳಿಸಿರುತ್ತಾರೆ. ಸದರಿ ರಸ್ತೆಯನ್ನು ವಾದಿ ಮತ್ತು ಸಾರ್ವಜನಿಕರು ನಿರ್ವಹಣೆ ಮಾಡದ ಕಾರಣ ಇಕ್ಕೆಲಗಳಲ್ಲಿ ಗಿಡ ಗಂಟೆಗಳು ಬೆಳೆದು ತಿರುಗಾಡಲು ದನಕರುಗಳನ್ನು ಕೊಂಡೊಯ್ಯಲು ಗಿಡಗೆಂಟೆಗಳು ಪರಚುತ್ತವೆ ಎಂಬ ಕಾರಣದಿಂದ ತಮ್ಮ 'ಬಿ' ಅನುಸೂಚಿ ಜಾಗದ ಮೂಲಕ ಸುಲಭವಾಗಿ ತನ್ನ ಜಮೀನಿಗೆ ಹೋಗಬಹುದೆಂಬ ದುರುದ್ದೇಶದಿಂದ ಸದರಿ ದಾವಾವನ್ನು ನ್ಯಾಯಾಲಯದ ಮುಂದೆ ತಂದಿರುತ್ತಾರೆ ಎಂದು ತಿಳಿಸಿರುತ್ತಾರೆ.

8. ಪ್ರತಿವಾದಿಯರು ಮುಂದುವರೆದು, ದಾವಾ ' ಎ' ಅನುಸೂಚಿ ಆಸ್ತಿಗೆ ಸುಲಭವಾಗಿ ಹೋಗಲು ಕೇವಲ 80 ಅಡಿ ದಾಟಿದರೆ ವಾದಿಯು ಆತನ ಜಮೀನಿಗೆ ಹೋಗಬಹುದು. ತಮ್ಮ ಜಮೀನು ಜಾವಗಲ್-ಬಾಣಾವರ ಮುಖ್ಯ ರಸ್ತೆಗೆ ಹೊಂದಿಕೊಂಡಿದ್ದು, ವಾದಿ ತನ್ನ ಗ್ರಾಮ ಕೆರೆಕೋಡಿಹಳ್ಳಿ ಗ್ರಾಮದಿಂದ ಜಾವಗಲ್ - ಬಾಣಾವರ ಮುಖ್ಯ ರಸ್ತೆಯ ಮೂಲಕ ಬಂದು ತಮ್ಮ 'ಬಿ' ಅನುಸೂಚಿ ಆಸ್ತಿಗಳನ್ನು ದಾಟಿದರೆ  ಸುಲಭವಾಗಿ ಆತನ ಜಮೀನಿಗೆ ಹೋಗಲು ಅನುಕೂಲವಾಗುತ್ತದೆ ಎಂಬ ದೃಷ್ಟಿಯಿಂದ ಈ ದಾವೆಯನ್ನು ತಂದು ' ಎ' ಅನುಸೂಚಿ ಆಸ್ತಿಗೆ ಸುಲಭವಾಗಿ ಹೋಗಿಬರುವ ಉದ್ದೇಶದಿಂದ 'ಬಿ' ಅನುಸೂಚಿ ಜಾಗದಲ್ಲಿ ಜಾಗ ಬಿಡಿಸಿಕೊಂಡು ತನಗೆ ಅನೂಕೂಲವಾಗುತ್ತದೆಂಬ ದುರುದ್ದೇಶದಿಂದ ವಾದಿಯು ಸದರಿ ಜಾಗದಲ್ಲಿ ರಸ್ತೆ ಇತ್ತು ಎಂಬ ಸಂಗತಿಯನ್ನು ನಮೂದು ಮಾಡಿರುತ್ತಾರೆ ಎಂದು ತಿಳಿಸಿರುತ್ತಾರೆ.

9. ಪ್ರತಿವಾದಿಯರು ಮುಂದುವರೆದು, ಜಾವಗಲ್ ಕೆರೆ ಕೋಡಿಯಿಂದ ವಾದಿಯ ಜಮೀನಿನವರೆಗೆ ಮೊದಲಿನಿಂದಲೂ ಇರುವ ಕಚ್ಚಾ ರಸ್ತೆ ಸುಮಾರು 20 ಅಡಿ ಅಗಲ 1 ಕಿ.ಮೀ. ಉದ್ದದ ರಸ್ತೆಯನ್ನು ಈಗ್ಗೆ ಒಂದು ವಾರದ ಹಿಂದೆ ಪಂಚಾಯಿತಿಯವರು ಸ್ವಚ್ಛಗೊಳಿಸಿ ತಿರುಗಡಲು ಯೋಗ್ಯ ರೀತಿಯಲ್ಲಿ ಮಾಡಿಕೊಟ್ಟಿರುತ್ತಾರೆ ಎಂದು ತಿಳಿಸಿರುತ್ತಾರೆ. ಮುಂದುವರೆದು, ವಾದಿಯ ಪ್ರಾರ್ಥನೆಯಂತೆ ಘನ ನ್ಯಾಯಾಲಯವು ದಿನಾಂಕ 30.07.2024 ರಂದು ವಾದಿಯ ಪರ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶವನ್ನು ನ್ಯಾಯಾಲಯವು ಆದೇಶ ಮಾಡಿರುತ್ತದೆ. ಸದರಿ ಆದೇಶದ ಪ್ರತಿಯೊಂದಿಗೆ ವಾದಿಯು ಜಾವಗಲ್ ಪೊಲೀಸ್ ಠಾಣೆಗೆ ಹೋಗಿ ಪೊಲೀಸ್ ನವರಿಗೆ ಪ್ರಭಾವ ಬೀರಿ ' ಬಿ' ಅನುಸೂಚಿ ಜಾಗದಲ್ಲಿ ಯಾವುದೇ ದಾರಿ ಇಲ್ಲದಿದ್ದರೂ ರಸ್ತೆ ಬಿಡಿಸಿಕೊಡುವಂತೆ ಒತ್ತಡ ಹಾಕಿರುತ್ತಾರೆ ಎಂದು ತಿಳಿಸಿರುತ್ತಾರೆ. ಅಲ್ಲದೇ ತಮ್ಮೊಂದಿಗೆ ಜಗಳ ಗಲಾಟೆ

ಮಾಡಿ 'ಬಿ' ಅನುಸೂಚಿ ಜಾಗದಲ್ಲಿ ಜೆ.ಸಿ.ಬಿ. ಮೂಲಕ ರಸ್ತೆ ನಿರ್ಮಾಣ ಮಾಡಲು ಪ್ರಯತ್ನ ಮಾಡಿದ್ದು, ತಾವು ವಾದಿಯ ನಡೆಯನ್ನು ಪ್ರತಿಭಟಿಸಿ ರಸ್ತೆ ನಿರ್ಮಾಣ ಮಾಡಲು ಅವಕಾಶ ಮಾಡಿಕೊಟ್ಟಿರುವುದಿಲ್ಲ. ಆದಾಗ್ಯೂ ವಾದಿಯು ಪ್ರತಿನಿತ್ಯ ತಮಗೆ ಒಂದಿಲ್ಲೊಂದು ಕಾರಣದಿಂದ ತೊಂದರೆ ನೀಡುತ್ತಿರುತ್ತಾರೆ ಎಂದು ತಿಳಿಸಿರುತ್ತಾರೆ.

10. ಪ್ರತಿವಾದಿಯರು ಮುಂದುವರೆದು, ವಾದಿಯು ದಾವಾದ 'ಬಿ' ಅನುಸೂಚಿ ಜಾಗದಲ್ಲಿ ಯಾವುದೇ ದಾರಿ ಇಲ್ಲದಿದ್ದರೂ ಮಧ್ಯಕಾಲೀನ ನಿರ್ಭಂದಕಾಜ್ಞೆ ಆದೇಶವನ್ನು ಪಡೆದುಕೊಂಡಿರುತ್ತಾರೆ. ಸದರಿ ಆದೇಶವನ್ನು ಮುಂದುವರೆಸಿದ ಪಕ್ಷದಲ್ಲಿ ವಾದಿಯು ಆದೇಶವನ್ನು ದುರುಪಯೋಗಪಡಿಸಿಕೊಂಡು ತಮಗೆ ತೊಂದರೆ ಕೊಡುತ್ತಾರೆಂದು ತಿಳಿಸಿರುತ್ತಾರೆ. ಅಲ್ಲದೇ ವಾದಿಯು ದಾವಾ 'ಬಿ' ಜಾಗದಲ್ಲಿ ರಸ್ತೆ ಇದ್ದ ಬಗ್ಗೆ ಹಾಗೂ ಆ ಜಾಗವನ್ನು ತಾನು ಉಪಯೋಗಿಸುತ್ತಿದ್ದ ಬಗ್ಗೆ ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಹಾಗೂ ತಮ್ಮ 'ಬಿ' ಅನುಸೂಚಿ ಜಾಗದಲ್ಲಿ ಯಾವುದೇ ದಾರಿ ಇರುವುದಿಲ್ಲ ಹಾಗೂ ಆ ಜಾಗವನ್ನು ವಾದಿಯು ಉಪಯೋಗಿಸುತ್ತಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಈ ಕಾರಣಗಳಿಂದಾಗಿ ಸದರಿ ಅರ್ಜಿಯನ್ನು ವಜಾಗೊಳಿಸಲು ಕೋರಿರುತ್ತಾರೆ.

11. ವಾದಿಯ ಪರ ಶ್ರೀ ಆರ್.ಎಲ್., ವಕೀಲರ ಹಾಗೂ ಪ್ರತಿವಾದಿಯ ಪರ ಶ್ರೀ ಎಸ್.ಎಂ., ವಕೀಲರ ವಾದವನ್ನು ಆಲಿಸಲಾಯಿತು ಮತ್ತು ಕಡತವನ್ನು ಪರಿಶೀಲಿಸಲಾಯಿತು.

12. ವಾದಿಯ ಮಧ್ಯಂತರ ಅರ್ಜಿಯಲ್ಲಿ ಅಂಶಗಳನ್ನು ಗಮನಿಸಿದಾಗ ಉದ್ಭವಿಸಿರುವ ಅಂಶಗಳು ಈ ಕೆಳಗಿನಂತಿವೆ.

ಅಂಶಗಳು

1. ವಾದಿಯು ತನ್ನ ಪರ ನಿರ್ಧರಿಸಬಹುದಾದಂತಹ ಪ್ರಕರಣ ಇದೆ ಎಂದು ಮೇಲೆ ನೋಟಕ್ಕೆ ರುಜುವಾತು ಪಡಿಸುವರೇ?

2. ವಾದಿಯ ಪರ ಸಮಾನತೆಯ ಸಂತುಲನೆ ಇದೆ ಎಂದು ರುಜುವಾಸುಪಡಿಸುವರೇ?

3. ತಾತ್ಕಾಲಿಕ ನಿರ್ಭಂದಕ ಆಜ್ಞೆ ಆದೇಶವನ್ನು ಹೊರಡಿಸದೇ ಇದ್ದರೆ ಯಾರಿಗೆ ತುಂಬಲಾರದ ನಷ್ಟ ಮತ್ತು ಹಾನಿಯುಂಟಾಗುತ್ತದೆ ?

4. ಯಾವ ಆದೇಶ ?

13. ವಾದವನ್ನು ಕೇಳಿ ಕಡತವನ್ನು ಕೂಲಂಕುಶವಾಗಿ ಪರಿಶೀಲಿಸಿದ ನಂತರ, ಈ ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಲಾಗಿದೆ.

ಅಂಶ ನಂ. 1 ರಿಂದ 3 **:** ನಕಾರಾತ್ಮಕವಾಗಿ

ಅಂಶ ನಂ. 4 **:** ಅಂತಿಮ ಆದೇಶದಂತೆ,
ಈ ಕೆಳಗೆ ವಿವರಿಸಿದ ಕಾರಣಗಳಿಗಾಗಿ.

ಕಾರಣಗಳು

**14.** **1 ರಿಂದ 3 ನೇ ಅಂಶಗಳು:-** ಈ ಎಲ್ಲಾ ಅಂಶಗಳು ಒಂದಕ್ಕೊಂದು ಪೂರಕ ಆಗಿರುವುದರಿಂದ ಪುನಾರಾವರ್ತನೆಯನ್ನು ತಪ್ಪಿಸಲು ಏಕ ಕಾಲದಲ್ಲಿ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

ವಾದಿ/ಅರ್ಜಿದಾರರು ತಾತ್ಕಾಲಿಕ ಪ್ರತಿಬಂದಕಾಜ್ಞೆಯ ಆದೇಶ ಕೋರಿ ವ್ಯವಹಾರ ಪ್ರಕ್ರಿಯ ಸಂಹಿತೆ ಆದೇಶ 39 ನಿಯಮ 1 ಮತ್ತು 2 ರಡಿಯಲ್ಲಿ ಮಧ್ಯಂತರ ಅರ್ಜಿಯನ್ನು ಪ್ರಮಾಣ ಪತ್ರದೊಂದಿಗೆ ಸಲ್ಲಿಸಿ, ಸದರಿ ಪ್ರಮಾಣ ಪತ್ರದಲ್ಲಿ ದಾವೆಯ ಎಲ್ಲಾ ಅಂಶಗಳನ್ನು ಪುನರುಚ್ಚರಿಸಿರುತ್ತಾರೆ.

15. ವಾದಿಯು ಸದರಿ 1 ನೇ ಮಧ್ಯಂತರ ಅರ್ಜಿಯಲ್ಲಿ ತಿಳಿಸುವುದೇನೆಂದರೆ ದಾವಾ 'ಎ' ಅನುಸೂಚಿ ಸ್ವತ್ತನ್ನು ತನ್ನ ತಂದೆ ಶಿವರುದ್ರೇಗೌಡ ರವರು ದಿನಾಂಕ 31.12.2009 ರಂದು ಕ್ರಯಕ್ಕೆ ಪಡೆದು ಅಂದಿನಿಂದ ದಾವಾ ಅನುಸೂಚಿ ಸ್ವತ್ತಿನ ಸ್ವಾಧೀನಾನುಭವದಲ್ಲಿ ಮುಂದುವರೆಸಿಕೊಂಡು ಬಂದಿರುತ್ತಾರೆ. ದಾವಾ ಅನುಸೂಚಿ ಎ ಸ್ವತ್ತಿಗೆ ಹೋಗಲು ವಾದಿಯು ಸರ್ವೆ ನಂ.25/8 ಮತ್ತು 25/3 ರ ಮಧ್ಯದಲ್ಲಿ ಹಾದು ಹೋಗಿರುವ ಓಣಿಯ ಮೂಲಕ ಹೋಗಬೇಕಾಗಿರುತ್ತದೆ. ಸದರಿ ರಸ್ತೆಯನ್ನು ವಾದಿಯು ಕಳೆದ 40 ವರ್ಷಗಳಿಂದಲೂ ಉಪಯೋಗಿಸುತ್ತಿರುತ್ತಾರೆ . ಸದರಿ ರಸ್ತೆ 8 ಅಡಿ ಅಗಲ 80 ಅಡಿ ಉದ್ದ ಇರುತ್ತದೆ. ಸದರಿ ರಸ್ತೆಯನ್ನು ವಾದಿಯು ವ್ಯವಾಸಯದ ಕೆಲಸಕ್ಕೆ ಹಾಗೂ ದನಕರುಗಳಿಗೆ ಕಟ್ಟೆಯಲ್ಲಿ ನೀರು ಕುಡಿಸಲು ಮತ್ತು ಟ್ರ್ಯಾಕ್ಟರ್ ಗಳಿಂದ ಓಡಾಡಲು ಬಳಸುತ್ತಿರುತ್ತಾರೆ. ವಾದಿಯು ಎ ಅನುಸೂಚಿ ಸ್ವತ್ತನ್ನು ತಲುಪಲು ಬಿ ಅನುಸೂಚಿ ಸ್ವತ್ತನ್ನು ಹೊರತುಪಡಿಸಿ ಬೇರೆ ದಾರಿ ಇರುವುದಿಲ್ಲ. ಸದರಿ ಬಿ ಷಡ್ಯೂಲ್ ದಾರಿಯನ್ನು ವಾದಿ ಮತ್ತು ಗ್ರಾಮಸ್ಥರು ಸುಮಾರು ವರ್ಷಗಳ ಕಾಲದಿಂದಲೂ ಉಪಯೋಗಿಸುತ್ತಿರುತ್ತಾರೆ. ಈ ಒಂದು ವಾರಗಳಿಂದ ಪ್ರತಿವಾದಿಯರು ಈ ದಾವೆಯ ದಾವಾ ಬಿ ಷಡ್ಯೂಲ್ ಸ್ವತ್ತಿನ ರಸ್ತೆಯಲ್ಲಿ ಓಡಾಡಬಾರದು ಎಂದು ತಕರಾರು ಮಾಡಿರುತ್ತಾರೆ. ಹೀಗಾಗಿ ಸದರಿ ಅರ್ಜಿಯನ್ನು ಪುರಸ್ಕರಿಸಲು ಕೋರಿರುತ್ತಾರೆ. ವಾದಿಯು ತನ್ನ ವಾದಕ್ಕೆ ಪೂರಕವಾಗಿ ದಾವಾ ಸ್ವತ್ತಿನ ದಿನಾಂಕ 31.12.2009 ರ ಶುದ್ಧ ಕ್ರಯಪತ್ರದ ನಕಲು ಪ್ರತಿಯನ್ನು, ದಾವಾ 'ಎ' ಅನುಸೂಚಿ ಸ್ವತ್ತಿನ ಗಣಕೀಕೃತ ಪಹಣಿ ಪತ್ರಿಕೆ ಹಾಗೂ ಮ್ಯುಟೇಶನ್ ರಿಜಿಸ್ಟರ್ ಪ್ರತಿಯನ್ನು ಹಾಜರುಪಡಿಸಿರುತ್ತಾರೆ. ಹಾಗೂ ಕೆಲವು ಫೋಟೋಸ್ ಗಳನ್ನು ಹಾಜರುಪಡಿಸಿರುತ್ತಾರೆ. ಸದರಿ ಓಣಿಯಂತಿರುವ ಜಾಗದಲ್ಲಿ ಪ್ರತಿವಾದಿಯರು ಬೇಲಿಗಳನ್ನು ಹಾಕಿರುವುದಾಗಿ ತಿಳಿರುತ್ತಾರೆ.

16. ಇದಕ್ಕೆ ಪ್ರತಿವಾದಿಯರು ತಕರಾರನ್ನು ಸಲ್ಲಿಸಿ ವಾದಿಯ ವಾದವನ್ನು ಅಲ್ಲಗಳೆಯುತ್ತಾ ವಾದಿಯು ತಿಳಿಸಿದಂತೆ ದಾವಾ ಬಿ ಅನುಸೂಚಿ ಸ್ವತ್ತಿನಲ್ಲಿ ತಿಳಿಸಿರುವಂತೆ ಯಾವುದೇ ದಾರಿ ಇರುವುದಿಲ್ಲ. ಸರ್ವೆ ನಂ.23 ಕ್ಕೆ ಹೋಗಲು ಬೇರೆ ದಾರಿ ಇರುವುದಿಲ್ಲ ಎಂಬುದು ಸುಳ್ಳಿನಿಂದ ಕೂಡಿರುತ್ತದೆ. ವಾದಿಯ ದಾವಾ ಎ ಷಡ್ಯೂಲ್ ಸ್ವತ್ತಿಗೆ ಹೋಗಲು ಮತ್ತು ಬರಲು ಜಾವಗಲ್ ಕೆರೆ ಏರಿಯ ಕಡೆ ಚಿಕ್ಕನಕಟ್ಟೆಯ ಕಡೆಗೆ ಸುಮಾರು 20 ಅಡಿ ಅಗಲ 1 ಕಿ.ಮೀ.ಉದ್ದದ ರಸ್ತೆ ಇರುತ್ತದೆ. ಅದೇ ರಸ್ತೆಯನ್ನು ವಾದಿಯು ಮೊದಲಿನಿಂದಲೂ ಉಪಯೋಗಿಸುತ್ತಾ ಬಂದಿರುತ್ತಾರೆ. ಸದರಿ ರಸ್ತೆಯನ್ನು ವಾದಿ ಮತ್ತು ಸಾರ್ವಜನಿಕರು ನಿರ್ವಹಣೆಯನ್ನು ಮಾಡದ ಕಾರಣ ಇಕ್ಕೆಲಗಳಲ್ಲಿ ಗಿಡಗಂಟೆಗಳು ಬೆಳೆದು ತಿರುಗಾಡಲು ಹಾಗೂ ದನಕರುಗಳನ್ನು ಕೊಂಡೊಯ್ಯಲು ಗಿಡಗಂಟೆಗಳು ಪರಚುತ್ತವೆ ಎಂಬ ಕಾರಣದಿಂದ ದಾವಾ ಬಿ ಅನುಸೂಚಿ ಮೂಲಕ ಸುಲಭವಾಗಿ ಹೋಗಬಹುದು ಎಂಬ ಕಾರಣದಿಂದ ಸದರಿ ದಾವೆಯನ್ನು ತಂದಿರುತ್ತಾರೆ. ದಾವಾ ಅನುಸೂಚಿ ಸ್ವತ್ತಿಗೆ ಜಾವಗಲ್-ಬಾಣಾವರದ ಮುಖ್ಯ ರಸ್ತೆಯಿಂದ ಕೇವಲ 80 ಅಡಿ ದಾಟಿದರೆ ಹೋಗಬಹುದು ಎಂಬ ಕಾರಣದಿಂದ ದಾವಾ ಬಿ ಅನುಸೂಚಿ ಸ್ವತ್ತಿನಲ್ಲಿ ತಿಳಿಸಿರುವ ದಾರಿಯನ್ನು ಬಿಡಿಸಿಕೊಳ್ಳುವ ದುರುದ್ದೇಶ ಹೊಂದಿರುತ್ತಾರೆ. ಜಾವಗಲ್ ಕೆರೆ ಕೋಡಿಯಿಂದ ವಾದಿಯ ಜಮೀನಿಗೆ ಮೊದಲಿನಿಂದಲೂ ಓಡಾಡುತ್ತಿರುವ ಕಚ್ಚಾ ರಸ್ತೆಯು 20 ಅಡಿ ಅಗಲ 1 ಕಿ.ಮೀ. ಉದ್ದ ಇದ್ದು, ಅದನ್ನು ಈಗ ಒಂದು ವಾರದ ಹಿಂದೆ ಸ್ವಚ್ಛಗೊಳಿಸಿ ತಿರುಗಾಡಲು ಯೋಗ್ಯ ಮಾಡಿಕೊಟ್ಟಿರುತ್ತಾರೆ. ವಾದಿಯ ಪ್ರಾರ್ಥನೆಯಂತೆ ಈ ನ್ಯಾಯಲಯವು ಏಕತರ್ಫಿ ಆದೇಶವನ್ನು ದಿನಾಂಕ 30.07.2024 ರಂದು ನೀಡಿದ್ದು, ಸದರಿ ಆದೇಶವನ್ನು ದುರುಪಯೋಗಪಡಿಸಿಕೊಂಡು ವಾದಿಯು ಪೊಲೀಸ್ ಠಾಣೆಗೆ ಹೋಗಿ ಬಿ ಅನುಸೂಚಿ ದಾರಿಯನ್ನು ಬಿಡಿಸಿಕೊಡುವಂತೆ ಒತ್ತಡ ಹಾಕಿರುತ್ತಾರೆ ಹಾಗೂ ಜಗಳ,

ಗಲಾಟೆ ಮಾಡಿ ಜೆ.ಸಿ.ಬಿ ಮೂಲಕ ರಸ್ತೆ ನಿರ್ಮಾಣ ಮಾಡಲು ಮುಂದಾಗಿರುತ್ತಾರೆ. ಇದಕ್ಕೆ ಪೂರಕವಾಗಿ ಪ್ರತಿವಾದಿಯರು ಫೋಟೋಗಳನ್ನು ಹಾಗೂ ಗ್ರಾಮ ನಕ್ಷೆಯನ್ನು ಹಾಜರುಪಡಿಸಿರುತ್ತಾರೆ.

17. ಸದರಿ ಕ್ರಯ ಪತ್ರವನ್ನು ಪರಿಶೀಲಿಸಿ ನೋಡಲಾಗಿ ದಾವಾ 'ಎ' ಅನುಸೂಚಿ ಸ್ವತ್ತನ್ನು ರಂಗೇಗೌಡ ಮತ್ತು ಬೀರಲಿಂಗರವರಿಂದ ವಾದಿಯ ತಂದೆ ಶಿವರುದ್ರೇಗೌಡ ಕ್ರಯಕ್ಕೆ ಕೊಂಡುಕೊಂಡಿರುವುದು ನಮೂದಾಗಿರುತ್ತದೆ. ಸದರಿ ಪಹಣಿ ಪತ್ರಿಕೆ ಹಾಗೂ ಮ್ಯುಟೇಶನ್ ರಿಜಿಸ್ಟರ್ ಪ್ರತಿಯನ್ನು ಪರಿಶೀಲಿಸಿ ನೊಡಲಾಗಿ ದಾವಾ 'ಎ' ಅನುಸೂಚಿ ಸ್ವತ್ತು ವಾದಿಯ ಹೆಸರಿನಲ್ಲಿ ನಮೂದಾಗಿರುವುದು ಕಂಡುಬರುತ್ತದೆ.

18. ಮುಂದುವರೆದು, ವಾದಿಯು ಪ್ರತಿವಾದಿಯ ಸರ್ವೆ ನಂ.25/8 ಮತ್ತು 25/3 ರ ಮಧ್ಯದಲ್ಲಿ ಓಣಿ ಹಾದುಹೋಗಿದ್ದು, ಸದರಿ ರಸ್ತೆಯನ್ನು ಕಳೆದ 40 ವರ್ಷಗಳಿಂದಲೂ ವಾದಿ ಹಾಗೂ ಗ್ರಾಮಸ್ಥರು ಉಪಯೋಗಿಸುತ್ತಿರುವುದಾಗಿ ತಿಳಿಸಿರುತ್ತಾರೆ. ರಸ್ತೆ(ಓಣಿ) 8 ಅಡಿ ಅಗಲ ಮತ್ತು 80 ಅಡಿ ಉದ್ದವಿದ್ದು, ಸದರಿ ರಸ್ತೆಯಲ್ಲಿ ತಾನು ವ್ಯವಸಾಯದ ಕೆಲಸಕ್ಕೆ ಹೋಗಲು ದನ ಕರುಗಳನ್ನು ಕಟ್ಟೆಯಲ್ಲಿ ನೀರು ಕುಡಿಸಲು ಮತ್ತು ಟ್ರಾಕ್ಟರ್ ಗಳಿಂದ ಓಡಾಡಲು ಬಳುತ್ತಿದ್ದ ಏಕೈಕ ದಾರಿಯಾಗಿದ್ದು ಸದರಿ ರಸ್ತೆಯು ಅನುಭೋಗದ ಹಕ್ಕಿಗೆ ಒಳಪಟ್ಟ ರಸ್ತೆಯಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಇದಕ್ಕೆ ಪೂರಕವಾಗಿ ವಾದಿಯು ಪ್ರತಿವಾದಿಯರ ಹೆಸರಿನಲ್ಲಿರುವ ಸರ್ವೆ ನಂ.25/8 ಮತ್ತು 25/3 ರ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿರುತ್ತಾರೆ.

19. ಮುಂದುವರೆದು, ದಾವಾ 'ಬಿ' ಅನುಸೂಚಿ ದಾರಿಯನ್ನು ಹೊರತುಪಡಿಸಿ 'ಎ' ಅನುಸೂಚಿ ಸ್ವತ್ತು ಮತ್ತು ಕಟ್ಟೆಗೆ ಹೋಗಲು ಮತ್ತು ಸರ್ವೆ ನಂ.24/6 ಹಾಗೂ

ಸರ್ವೆ ನಂ.23 ಕ್ಕೆ ಹೋಗಲು ಯಾವುದೇ ಬೇರೆ ದಾರಿ ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ಸದರಿ ದಾವಾ ಬಿ ಷಡ್ಯೂಲ್ ರಸ್ತೆಯಲ್ಲಿಯೇ ತಾನು ಮತ್ತು ಗ್ರಾಮಸ್ಥರು ಸುಮಾರು ವರ್ಷಗಳ ಕಾಲದಿಂದಲೂ ಓಡಾಡುತ್ತಿದ್ದು ಪ್ರತಿವಾದಿಯರು ಈಗ್ಗೆ ಒಂದು ವಾರದಿಂದ ಹಿಂದೆ ಸದರಿ ದಾರಿಯಲ್ಲಿ ಓಡಾಟ ಮಾಡಬಾರದು ಎಂದು ತಕರಾರು ಮಾಡಿ ರಸ್ತೆಗೆ ಬೇಲಿ ಹಾಕಲು ಪ್ರಯತ್ನಪಟ್ಟಿರುತ್ತಾರೆಂದು ತಿಳಿಸಿರುತ್ತಾರೆ. ಮುಂದುವರೆದು ಪ್ರತಿವಾದಿಯರು ದಾರಿ ಮುಚ್ಚುವ ಪ್ರಯತ್ನ ಮಾಡಿದ ಸಂದರ್ಭದಲ್ಲಿ ವಾದಿ ಮತ್ತು ಗ್ರಾಮಸ್ಥರು ಪ್ರಶ್ನೆ ಮಾಡಲಾಗಿ ಸ್ಥಳದಲ್ಲಿ ಗಲಾಟೆಯಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಪ್ರತಿವಾದಿಯರು ಒಂದು ವಾರದ ಹಿಂದೆ ತನ್ನ ಓಡಾಟಕ್ಕೆ ತೀವ್ರವಾಗಿ ತೊಂದರೆಯನ್ನುಟು ಮಾಡಿರುತ್ತಾರೆ. ಇದಕ್ಕೆ ಪೂರಕವಾಗಿ ವಾದಿಯು ಜಾವಗಲ್ ಠಾಣೆಯಲ್ಲಿ ದೂರನ್ನು ನೀಡಿರುವುದಾಗಿ ತಿಳಿಸಿದ್ದು, ಸದರಿ ದೂರಿನ ಸ್ವೀಕೃತಿ ಪ್ರತಿಯನ್ನು ಹಾಜರುಪಡಿಸಿರುತ್ತಾರೆ.

20. ಪ್ರತಿವಾದಿಯರು ಮುಂದುವರೆದು, ವಾದಿ ತನ್ನ ಗ್ರಾಮ ಕೆರೆಕೋಡಿಹಳ್ಳಿ ಗ್ರಾಮದಿಂದ ಜಾವಗಲ್ - ಬಾಣಾವರ ಮುಖ್ಯ ರಸ್ತೆಯಿಂದ ಬಂದರೆ ದಾವಾ ಬಿ ಷಡ್ಯೂಲ್ ಸ್ವತ್ತನ್ನು ದಾಟಿದರೆ ವಾದಿಯ ಜಮೀನು ಸಿಗುತ್ತದೆ. ದಾವಾ ' ಎ' ಅನುಸೂಚಿ ಆಸ್ತಿಗೆ ಸುಲಭವಾಗಿ ಹೋಗಬಹುದು ಎಂಬ ಕಾರಣದಿಂದ, ಸದರಿ ಮಧ್ಯಂತರ ಅರ್ಜಿಯನ್ನು ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ. ಇದಕ್ಕೆ ಪೂರಕವಾಗಿ ಕಚ್ಚಾ ನಕ್ಷೆ ಹಾಗೂ 6 ಗೂಗಲ್ ಮ್ಯಾಪ್ ಮೂಲಕ ತೆಗೆದ ಛಾಯಾಚಿತ್ರಗಳನ್ನು ಹಾಗೂ ಕೆರೆಕೋಡಿಹಳ್ಳಿ ಗ್ರಾಮದ ಗ್ರಾಮ ನಕ್ಷೆಯನ್ನು ಹಾಜರುಪಡಿಸಿರುತ್ತಾರೆ.

21. ಪ್ರತಿವಾದಿಯರು ಸಲ್ಲಿಸಿರುವ ಗ್ರಾಮನಕ್ಷೆಯನ್ನು ಅವಲೋಕಿಸಿದಾಗ ವಾದಿಯು ತಿಳಿಸಿರುವಂತೆ ಪ್ರತಿವಾದಿಯ ಸರ್ವೆ ನಂ.25/8 ಮತ್ತು 25/3 ರ ಮಧ್ಯದಲ್ಲಿ

ದಾರಿ ಇರುವುದು ಕಾಣಬಹುದಾಗಿದೆ ಹಾಗೇಯೇ ಪ್ರತಿವಾದಿಯರು ತಿಳಿಸಿರುವಂತೆ ಜಾವಗಲ್ ಕೆರೆ ಕೋಡಿಯಿಂದ ವಾದಿಯ ಜಮೀನಿಗೆ ರಸ್ತೆಯು ಇರುವುದು ಸಹ ಸದರಿ ನಕ್ಷೆಯಲ್ಲಿ ಗಮನಿಸಬಹುದಾಗಿದೆ. ವಾದಿಯು ದಾವಾ ಬಿ ಷಡ್ಯೂಲಿ ಸ್ವತ್ತನ್ನು ತಾನೂ ಸೇರಿದಂತೆ ಗ್ರಾಮಸ್ಥರು ಸುಮಾರು 40 ವರ್ಷಗಳಿಂದ ಉಪಯೋಗಿಸುತ್ತಿರುವುದಾಗಿ ತಿಳಿಸಿರುತ್ತಾರೆ. ಆದರೆ 40 ವರ್ಷಗಳಿಂದ ಉಪಯೋಗಿಸುತ್ತಿರುವುದಕ್ಕೆ ಯಾವುದೇ ರೀತಿಯ ದಾಖಲೆಗಳು ಈ ಹಂತದಲ್ಲಿ ಕಂಡುಬಂದಿರುವುದಿಲ್ಲ. ಪ್ರತಿವಾದಿಯ ಪರ ವಕೀಲರು ಜಾವಗಲ್ ಕೆರೆಕೋಡಿಯಿಂದ ವಾದಿಯ ಜಮೀನಿಗೆ ಹೋಗಲು ಕಚ್ಚಾ ರಸ್ತೆ ಇದ್ದು ಅದನ್ನು ಉಪಯೋಗಿಸಿದೇ ಮುಳ್ಳು ಕಡ್ಡಿಗಳಿಂದ ಕೂಡಿದ್ದು, ಈಗ ಅದನ್ನು ಗ್ರಾಮ ಪಂಚಾಯಿತಿಯವರು ಸರಿಪಡಿಸಿರುತ್ತಾರೆ ಎಂದು ತಿಳಿಸಿರುತ್ತಾರೆ. ಸದರಿ ಕಚ್ಚಾ ರಸ್ತೆಯನ್ನು ಗ್ರಾಮ ಪಂಚಾಯಿತಿಯವರು ಈಗ ಸರಿಪಡಿಸಿರುವುದರ ಕುರಿತು ವಾದಿಯು ಯಾವುದೇ ತಕರಾರನ್ನು ಮಾಡಿರುವುದಿಲ್ಲ. ಅಂದರೆ ಕಚ್ಚಾ ರಸ್ತೆ ಯಾವುದು ಇಲ್ಲ ಎಂಬ ಖಂಡನೀಯವಾದವನ್ನು ತೆಗೆದುಕೊಂಡಿರುವುದಿಲ್ಲ. ಆದಾಗ್ಯೂ ಗ್ರಾಮ ನಕ್ಷೆಯಲ್ಲಿ ಸದರಿ ಕಚ್ಚಾ ರಸ್ತೆಯ ಗುರುತನ್ನು ನೋಡಬಹುದಾಗಿದೆ. ಸದರಿ ಸಮಯದಲ್ಲಿ ನ್ಯಾಯಾಲಯದ ವಿವೇಚನೆಗೆ ಯಾವಾಗ ಅನುಭೋಗದ ಹಕ್ಕನ್ನು ಪಡೆಯಬಹುದು ಎಂಬ ಪ್ರಶ್ನೆಯು ಉಂಟಾಗುತ್ತದೆ. ಆ ವಿಚಾರವಾಗಿ ಅವಲೋಕಿಸಲಾಗಿ ಅನುಭೋಗದ ಹಕ್ಕನ್ನು ಪಡೆಯಲು ಸದರಿ ಸ್ವತ್ತಿನ ಉಪಯೋಗದ ಅವಶ್ಯಕತೆಯನ್ನು ಮೊದಲಿಗೆ ಪರಿಗಣಿಸಬೇಕಾಗುತ್ತದೆ. ಅನುಭೋಗ ಹಕ್ಕಿನ ಮೂಲ ಉದ್ದೇಶ ಯಾವುದೇ ವ್ಯಕ್ತಿ ತನ್ನ ಸ್ವತ್ತು ಅಥವಾ ಜಮೀನುನ್ನು ಸೇರಲು ಇತರೆ ಯಾವುದೇ ಪರ್ಯಾಯ ದಾರಿ ಇಲ್ಲದಿದ್ದಾಗ ತಾನು ಇತರರ ಸ್ವತ್ತಿನಲ್ಲಿ ಈಗಾಗಲೇ 20 ವರ್ಷಗಳಿಗೆ ಮೇಲ್ಪಟ್ಟು ಪಡೆದುಕೊಂಡು ಬಂದಿರುವ ಅನುಭೋಗದ ಹಕ್ಕನ್ನು ಮುಂದುವರೆಸಿರುವುದಾಗಿರುತ್ತದೆ. ಕೇವಲ ಮೌಖಿಕವಾಗಿ 40 ವರ್ಷಗಳಿಂದ ಸದರಿ

ದಾರಿಯನ್ನು ಉಪಯೋಗಿಸುತ್ತಿರುವುದಾಗಿ ತಿಳಿಸಿದ ಮೇರೆಗೆ ಈ ಹಂತದಲ್ಲಿ ಅನುಭೋಗದ ಹಕ್ಕನ್ನು ಪೂರ್ವಭಾವನೆಯನ್ನು ಹೊಂದಲು ಸಾಧ್ಯವಿಲ್ಲ. ವಾದಿಯು ತನ್ನ ಜಮೀನಿಗೆ ಹೋಗಲು ದಾವಾ ಬಿ ಷಡ್ಯೂಲ್ ಸ್ವತ್ತು ಹೊರತುಪಡಿಸಿ ಬೇರೆ ಪಾರ್ಯಾಯ ದಾರಿ ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ಆದರೆ ಈ ಹಂತದಲ್ಲಿ ವಾದಿ ತಾನು ತನ್ನ ಜಮೀನಿಗೆ ಹೋಗಲು ಪರ್ಯಾಯವಾದ ದಾರಿ ಇರುವುದು ಗ್ರಾಮನಕ್ಷೆಯಿಂದ ಕಂಡುಬಂದಿರುತ್ತದೆ ಹಾಗೂ ಈ ಹಂತದಲ್ಲಿ ವಾದಿಯು ದಾವಾ ಬಿ ಷಡ್ಯೂಲ್ ಸ್ವತ್ತನ್ನು 40 ವರ್ಷಗಳಿಂದ ಉಪಯೋಗಿಸುತ್ತಿರುತ್ತಾರೆ ಎಂಬುದಕ್ಕೆ ಸಾಕಷ್ಟು ಆಧಾರಗಳು ಲಭ್ಯವಿರುದಿಲ್ಲ. ಹೀಗಾಗಿ ಸದರಿ ಅರ್ಜಿಯನ್ನು ಪುರಸ್ಕರಿಸಬೇಕಾದ ಸಾಕಷ್ಟು ಕಾರಣ ಲಭ್ಯವಾಗಿರುವುದಿಲ್ಲ ಹಾಗೂ ಸದರಿ ಅರ್ಜಿಯನ್ನು ಪುರಸ್ಕರಿಸದಿದ್ದಲ್ಲಿ ವಾದಿಗೆ ಉಂಟಾಗುವ ನಷ್ಟವು ಮೇಲ್ನೋಟಕ್ಕೆ ಈ ಹಂತದಲ್ಲಿ ಕಂಡುಬಂದಿರುವುದಿಲ್ಲ. ಈ ಮೇಲೆ ಹೇಳಿದ ಎಲ್ಲಾ ಕಾರಣಗಳಿಂದಾಗಿ ಅಂಶ **1** ರಿಂದ ***3*** ಅನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ**.**

**23.** **4** ನೇ ಅಂಶ**:-** ಮೇಲೆ ಚರ್ಚಿಸಿರುವ ಕಾರಣಗಳಿಗಾಗಿ ನ್ಯಾಯಾಲಯ ಕೆಳಗಿನಂತೆ ಆದೇಶ ಮಾಡಲಾಗಿದೆ.

ಆದೇಶ

ವಾದಿ/ಅರ್ಜಿದಾರರು ತಾತ್ಕಾಲಿಕ ಪ್ರತಿಬಂದಕಾಜ್ಞೆಯ ಆದೇಶ ಕೋರಿ ವ್ಯವಹಾರ ಪ್ರಕ್ರಿಯ ಸಂಹಿತೆ ಆದೇಶ 39 ನಿಯಮ 1 ಮತ್ತು 2 ರಡಿಯಲ್ಲಿ ಸಲ್ಲಿಸಿರುವ ಮಧ್ಯಂತರ ಅರ್ಜಿಯನ್ನು ವಜಾಗೊಳಿಸಲಾಗಿದೆ**.**

ಖರ್ಚಿನ ಬಗ್ಗೆ ಯಾವುದೇ ಆದೇಶ ಇರುವುದಿಲ್ಲ.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ನೀಡಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲು ಹೇಳಿ, ನಂತರ ಓದಿ ಸೂಕ್ತ ತಿದ್ದುಪಡಿ ಮಾಡಿ ಇಂದು ದಿನಾಂಕ: 16 ನೇ ನವೆಂಬರ್ 2024 ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲ್ಪಟ್ಟಿತು.)

(ಶ್ರೀಮತಿ ಮಮತ ಪಿ.)
ಪ್ರಧಾನ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಅರಸೀಕೆರೆ.